
ನೆರವೇರಿಸಿದ ಸ್ವಾಮೀಜಿ ಗಾಢವಾದ ಧ್ಯಾನದಲ್ಲಿ ಲೀನರಾಗಿದ್ದರು. ಧ್ಯಾನದ ಸ್ಥಿತಿಯಿಂದ ಪ್ರಕೃತಿಸ್ಥರಾಗುತ್ತಿದ್ದಂತೆ ಪಿಸುದನಿಯಲ್ಲಿ ''ಈ ಹುಡುಗಿ ಸಾಮಾನ್ಯಳಲ್ಲ. ಇವಳು ತನ್ನ ಹಲವಾರು ಪೂರ್ವಜನ್ಮಗಳ ಸಾತ್ವಿಕ ಸಂಸ್ಕಾರಗಳ ಫಲದಿಂದ ಈ ಜನ್ಮ ತಳೆದು ಬಂದಿದ್ದಾಳೆ'' ಎಂದು ನುಡಿದರು.

ಆದಾಗ್ಯೂ ಮೊನಿಕಾ ರಾಯ್‌ಳ ಜೀವನವನ್ನು ನೋಡಿದಾಗ ಸ್ವಲ್ಪ ವಿಚಿತ್ರ ಎನಿಸಬಹುದು. ಅವಳು ಉನ್ನತ ಶಿಕ್ಷಣವನ್ನು ಪಡೆದಿದ್ದಳು. ಲಖನೌನ ಜ್ಞಾನೇಂದ್ರನಾಥ ಚಕ್ರವರ್ತಿಯವರೊಂದಿಗೆ ಅವಳ ವಿವಾಹವಾಗಿತ್ತು. ಜ್ಞಾನೇಂದ್ರನಾಥ ಕೂಡ ತುಂಬ ಬುದ್ಧಿವಂತ ಶಿಕ್ಷಣ ತಜ್ಞನಾಗಿದ್ದ. ಅವನು ಅಂತರ್ಮುಖಿ ವ್ಯಕ್ತಿಯಾಗಿದ್ದ. ಸರಕಾರದ ವಲಯಗಳಲ್ಲಿ ಹಾಗೂ ಸಾಮಾಜಿಕ ವಲಯಗಳಲ್ಲಿ ಅವನು ತುಂಬ ಪ್ರಭಾವಶಾಲಿ ಕೂಡ. ೧೮೯೩ನೇ ಇಸವಿಯಲ್ಲಿ ಜರುಗಿದ ವಿಶ್ವಧರ್ಮ ಸಮ್ಮೇಳನದಲ್ಲಿಯೂ ಅವನು ಭಾಗವಹಿಸಿದ್ದ. ಲಖನೌ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿಯೂ ಸೇವೆಸಲ್ಲಿಸಿದ್ದ. ಚಿಕಾಗೋ ಧರ್ಮಸಮ್ಮೇಳನದಲ್ಲಿ ಭಾರತದ ಥಿಯೋಸೋಫಿಸ್ಟ್ ಗುಂಪಿನ ಪ್ರತಿನಿಧಿಯಾಗಿ ಭಾಗವಹಿಸಿದ್ದ. ಅಲಹಾಬಾದಿನಲ್ಲಿ ಕಾನೂನು ವ್ಯಾಸಂಗ ಪೂರೈಸಿದ್ದ ಜ್ಞಾನೇಂದ್ರನಾಥ ವಕೀಲಿ ವೃತ್ತಿಯನ್ನು ಇಷ್ಟಪಡದೆ ಶಿಕ್ಷಣತಜ್ಞನಾಗಿ ಕಾರ್ಯ ಕೈಗೊಂಡನು. ಅವನ ಥಿಯೋಸೋಫಿಯಲ್ಲಿಯ ಆಸಕ್ತಿ ಮಾತ್ರ ಕೊನೆಯ ದಿನದವರೆಗೂ ಕಡಿಮೆಯಾಗಲಿಲ್ಲ. *(Collected from Mirtola Ashrama reflections)*

ಮೊನಿಕಾ ಕೂಡ ತನ್ನ ಪತಿಯೊಂದಿಗೆ ಭಾರತದಾದ್ಯಂತ ಹಾಗೂ ಪರದೇಶಗಳಲ್ಲಿ ಸಂಚರಿಸಿ ಬಂದಿದ್ದಳು. ಅವಳು ಕೂಡ ಯುರೋಪದ ಹಾಗೂ ಅಮೆರಿಕೆಗಳ ಗಣ್ಯರ ಸಭೆಗಳಲ್ಲಿ ಭಾಗವಹಿಸುತ್ತಿದ್ದಳು. ಎಷ್ಟೋ ಜನ ಅವಳ ವೈಯಾರ, ಹಾಗೂ ಅವಳ ಠೀವಿಗಳಿಂದ ಆಕರ್ಷಿತರಾಗಿದ್ದರು.

ಶ್ರೀಮಂತ ಭಾರತೀಯರು ಬ್ರಿಟಿಷ್ ಅಧಿಕಾರಿಗಳನ್ನು ತಮ್ಮ ಮನೆಗೆ ಆಮಂತ್ರಿಸಿ ಸಂತೋಷಕೂಟಗಳನ್ನು ಏರ್ಪಡಿಸುತ್ತಿದ್ದರು. ಅಂದಿನ ಸಮಾಜದಲ್ಲಿ ಅದೊಂದು ಪ್ರತಿಷ್ಠೆಯ ಸಂಕೇತವಾಗಿತ್ತು. ಇಂತಹ ಸಭೆಗಳಲ್ಲಿ ಭಾಗವಹಿಸುತ್ತಿದ್ದ ಮೊನಿಕಾ ಕೂಡ ಮದ್ಯ ಸೇವಿಸುತ್ತಿದ್ದಳು, ಧೂಮಪಾನ ಮಾಡುತ್ತಿದ್ದಳು. ಆ ದಿನಗಳಲ್ಲಿ ಸುಪ್ರಸಿದ್ಧನಾಗಿದ್ದ ದಿಲೀಪಕುಮಾರ ರಾಯ್ ಎಂಬ ಸಂಗೀತಗಾರ ಅವಳ ಸೌಂದರ್ಯ ಹಾಗೂ ಅವಳ ಆಧುನಿಕತೆಯ ನಡೆನುಡಿಗಳಿಗೆ ಮಾರುಹೋಗಿ ಅವಳನ್ನು 'Dame da salo' (ಫ್ರೆಂಚ್ ಭಾಷೆಯಲ್ಲಿ ಸಾಮಾಜಿಕ ಸಭೆಗಳಲ್ಲಿಯ ಅತ್ಯಂತ ಆಕರ್ಷಕ ವ್ಯಕ್ತಿ) ಎಂದು ಕರೆದಿದ್ದ. ಅವನು ಒಬ್ಬ ಶ್ರೇಷ್ಠ ಬರಹಗಾರ ಕೂಡ ಆಗಿದ್ದ. ಒಟ್ಟಾರೆ ಮೊನಿಕಾಳ ಜೀವನ ಶೈಲಿ ಹಾಗೂ ದರ್ಪಗಳನ್ನು ಕಂಡ ಎಷ್ಟೋ ಜನ ಅವಳನ್ನು 'ರಾಣಿ ಜೇನುಹುಳ' (Queen Bee) ಎಂದು ವರ್ಣಿಸಿದ್ದರು!



ಇಂತಹ ಒಬ್ಬ ವ್ಯಕ್ತಿ ಇದ್ದಕಿದ್ದ ಹಾಗೆ ಒಂದು ದಿನ ತನ್ನ ವೈಯಾರದ ಹಾಗೂ ವೈಭವದ ಜೀವನಕ್ಕೆ ತಾನೇ ಜುಗುಪ್ಸೆಗೊಂಡು ವೈರಾಗ್ಯದ ದಾರಿಯತ್ತ ಬದುಕು ಸಾಗಿಸುವ ನಿರ್ಧಾರ ಕೈಗೊಂಡಳೆಂದರೆ ಆಶ್ಚರ್ಯದ ಸಂಗತಿ ಅಲ್ಲವೆ? ಅವಳು ಶ್ರೀಕೃಷ್ಣನ ಪರಮ ಭಕ್ತೆಯಾದಳು! ಅವಳ ಪತಿ ಕೂಡ ಅವಳ ಬದುಕಿನ ನಿರ್ಧಾರದ ಸಂಪೂರ್ಣ ಸ್ವಾತಂತ್ರ್ಯವನ್ನು ಅವಳಿಗೆ ನೀಡಿದ್ದ. ಅವನು ಕೂಡ ಸ್ವತಃ ಥಿಯೋಸೋಫಿ ಸೊಸೈಟಿಯಿಂದ ಪ್ರೇರಿತನಾಗಿದ್ದವನೇ ಆದದ್ದರಿಂದ ಸತಿಪತಿಯರೀರ್ವರೂ ತಮ್ಮದೇ ಆದ ದಾರಿಯಲ್ಲಿ ಆಧ್ಯಾತ್ಮಿಕ ಜೀವನವನ್ನು ಸಾಗಿಸುತ್ತಿದ್ದರು. ಬೆಳಗ್ಗೆ ಮೂರು ಗಂಟೆಗೆ ಎದ್ದು ಆರು ಗಂಟೆಯವರೆಗೆ ಧ್ಯಾನ ಮಾಡುತ್ತಿದ್ದರು.

ಸಂಸಾರ ಜೀವನವನ್ನು ತ್ಯಾಗಮಾಡಿ ಮೊನಿಕ ಸಂನ್ಯಾಸಿನಿಯಾಗಿ ಹಿಮಾಲಯದ ಪದತಳದಲ್ಲಿ 'ಮಿರ್ತಳಾ' ಎನ್ನುವ ಸ್ಥಳದಲ್ಲಿ ತನ್ನ ಆಶ್ರಮವನ್ನು ನಿರ್ಮಿಸಿದಳು. 'ಯಶೋದಾಮಾ' ಎಂಬ ಸಂನ್ಯಾಸದ ನಾಮದಿಂದ ತನ್ನ ಉಳಿದ ಜೀವಿತವನ್ನೆಲ್ಲ ಜಪ, ಧ್ಯಾನ, ಸಾಧನೆ ಹಾಗೂ ಸಮಾಜಸೇವೆಗಳಲ್ಲಿ ಕಳೆದಳು. ಜ್ಞಾನೇಂದ್ರನಾಥ ಅವಳಿಗಿಂತ ಇಪ್ಪತ್ತೊಂದು ವರ್ಷಗಳಷ್ಟು ದೊಡ್ಡವನಾಗಿದ್ದ. ಅವನು ೧೯೩೭ನೇ ಇಸವಿಯಲ್ಲಿ ಇಹಲೋಕಯಾತ್ರೆ ಮುಗಿಸಿದ. ದಂಪತಿಗಳೀರ್ವರಿಗೆ ನಾಲ್ಕು ಜನ ಮಕ್ಕಳಿದ್ದು ಜ್ಞಾನೇಂದ್ರನಾಥರ ಮರಣದ ಸಮಯದಲ್ಲಿ ಅವರ ಪುತ್ರಿ ಮೋತಿ ರಾಣಿ (ಅರ್ಪಿತಾ ಎಂದು ಕೂಡ ಅವಳನ್ನು ಕರೆಯುತ್ತಿದ್ದರು) ಅಲ್ಲಿಯೇ ಇದ್ದಳು. ಕೇವಲ ಬಾಲಕಿ ಇದ್ದಾ